# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-5700117
ವೆಬ್ ಸೈಟ್: www.cescmysore.org
CIN:U40109KA2004SGC035177

C.E.S.C. MYSORE

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org


ಸಂಖ್ಯೆ: ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2017-18/ ೮೪೮-೯೯ ದಿನಾಂಕ: ೦೫.೦೯.2017

## ಸಭೆಯ ನಡಾವಳಿಗಳು

5/9

<u>ದಿನಾಂಕ 02.08.2017 ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.</u>

<u>ಸಭೆಯಲ್ಲಿ ಹಾಜರಿದ್ದವರು:-</u>

1. ಶ್ರೀ.ಕೆ.ರಾಮಚಂದ್ರ : ಅಧೀಕ್ಷಕ ಇಂಜಿನಿಯರ್ (ವಿ), ಮೈಸೂರು ವೃತ್ತ.
2. ಶ್ರೀಮತಿ ತಾರಾ ಎನ್. : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ವೃತ್ತ ಕಛೇರಿ, ಮೈಸೂರು.
3. ಶ್ರೀ.ಬಿ.ಸೋಮಶೇಖರ್ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
4. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ ಉಪವಿಭಾಗ.
5. ಶ್ರೀ.ಪಿ.ಎನ್.ದೇವಯ್ಯ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ತಾಂ), ಮಡಿಕೇರಿ ವಿಭಾಗ.
6. ಶ್ರೀ.ಎ.ಎ.ದಿನೇಶ್ : ಲೆಕ್ಕಾಧಿಕಾರಿಗಳು, (ಆಂ.ಲೆ.ಪ), ಮಡಿಕೇರಿ ವಿಭಾಗೀಯ ಕಛೇರಿ.
7. ಶ್ರೀ.ಶಿವನಗೌಡ ಪಾಟೀಲ : ಸಹಾಯಕರು ಇಂಜಿನಿಯರ್(ವಿ), ವಿರಾಜಪೇಟೆ ಶಾಖೆ.
8. ಶ್ರೀ.ಎಚ್.ಎಸ್.ರಮೇಶ್ : ಕಿರಿಯ ಇಂಜಿನಿಯರ್(ವಿ), ಅಮ್ಮತ್ತಿ ಶಾಖೆ.
9. ಶ್ರೀ.ಕೆ.ಎಂ.ದಿಲೀಪ್ : ಸಹಾಯಕರು ಇಂಜಿನಿಯರ್(ತಾಂ), ವಿರಾಜಪೇಟೆ ಉಪವಿಭಾಗ.
10. ಶ್ರೀ.ಎನ್.ಟಿ.ಮಾದಯ್ಯ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಪಾಲಿಬೆಟ್ಟ ಶಾಖೆ.
11. ಶ್ರೀ.ನವೀನ್‌ಕುಮಾರ್ ಜೈನ್ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಸಿದ್ದಾಪುರ ಶಾಖೆ.
12. ಶ್ರೀ.ಹರೀಶ್.ಎಂ.ಎಸ್ : ಹಿರಿಯ ಸಹಾಯಕರು, ಕಂದಾಯ ಶಾಖೆ, ವಿರಾಜಪೇಟೆ
13. ಶ್ರೀ.ನಾರಾಯಣ : ವ್ಯವಸ್ಥಾಪಕರು, ಮೆ:ಐಡಿಯಾ ಇನ್ಫಿನಿಟಿ ಐಟಿ ಸಲ್ಯುಸನ್, ಬೆಂಗಳೂರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಗೆ ಹಾಜರಿದ್ದ ಅಧೀಕ್ಷಕ ಇಂಜಿನಿಯರ್ (ವಿ) ರವರಾದ ಕೆ.ರಾಮಚಂದ್ರ ರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಳ್ಳುತ್ತ ಸಭೆಗೆ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸುತ್ತ ದಿನಾಂಕ:17.05.2017 ರಂದು ನಡೆದ ಸಭೆಯ ನಡಾವಳಿಗಳ ಬಗ್ಗೆ ಹಾಗು ಸಾಧಿಸಿದ ಪ್ರಗತಿ ಬಗ್ಗೆ ಚರ್ಚಿಸಿ ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

<u>ದಿನಾಂಕ 17.05.2017 ರಂದು ವಿರಾಜಪೇಟೆ ಉಪವಿಭಾಗದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಬಾಕಿ ಉಳಿದಿರುವ ದೂರುಗಳ ವಿವರ</u>

| ಕ್ರಮ ಸಂಖ್ಯೆ | ಸಲಹೆ/ದೂರು ಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 1 | ಶ್ರೀ.ಚೇಕು | ಅಮ್ಮತ್ತಿ ಶಾಖಾ ವ್ಯಾಪ್ತಿಯ ಹಾಲುಗುಂದ ಗ್ರಾಮದ ಅನಿಯಮಿತ ವಿದ್ಯುತ್ ಅಡಚಣೆಯನ್ನು ನಿವಾರಿಸುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು. | * ಅಮ್ಮತ್ತಿ ಫೀಡರ್‌ನಲ್ಲಿ ಅತೀವ ವಿದ್ಯುತ್ ಅಡಚಣೆಯಾಗುತ್ತಿದ್ದು, ಚೆಂಬೆಬೆಳ್ಳೂರು ಹಾಗು ಹಾಲುಗುಂದ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಪ್ರತ್ಯೇಕ ಫೀಡರ್ ನಿರ್ಮಿಸಲು ಈಗಾಗಲೇ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಮಂಜೂರಾತಿಗಾಗಿ ಸಲ್ಲಿಸಲಾಗುವುದೆಂದು ಸ.ಕಾ.ನಿ.ಇಂಜಿನಿಯರ್(ವಿ), ವಿರಾಜಪೇಟೆ ತಿಳಿಸಿದರು. ವಿರಾಜಪೇಟೆ ಉಪವಿಭಾಗದ ಗ್ರಾಮಾಂತರ ಪ್ರದೇಶಗಳಲ್ಲಿ ಉಂಟಾಗುತ್ತಿರುವ ಅಡಚಣೆ ಮಿತಿಗೊಳಿಸಲು ಹೆಚ್ಚುವರಿ ಫೀಡರ್‌ಗಳ ನಿರ್ಮಾಣ ಕಾರ್ಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಧೀನ್ ದಯಾಳ್ ಗ್ರಾಮ ವಿದ್ಯುತ್ ಯೋಜನೆಯಡಿ ಮಂಜೂರಾತಿ ದೊರಕಿದ್ದು, ಕಾಮಗಾರಿಯ ಸರ್ವೆ ಕಾರ್ಯ ನಡೆಸಲಾಗುತ್ತಿದೆಯೆಂದು ತಿಳಿಸಿದರು. |

ಚಾವಿಸನಿನಿ. ನಿಗಮ ... ಸರಸ್ವತಿಪುರಂ, ಮೈಸೂರು
ನಂ. 1280
ತಾ. 08/09/17

DWH-RA-1
08/09

ದಿನಾಂಕ 02.08.2017 ರಂದು ಪಡೆದ ದೂರುಗಳ ವಿವರ:-

| ಕ್ರಮ ಸಂಖ್ಯೆ | ಸಲಹೆ/ದೂರುಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ ದೂರುಗಳಿಗೆ ಉತ್ತರ |
|---|---|---|---|
| 1 | ಶ್ರೀ.ಬಿ.ಟಿ.ಕುಟ್ಟಪ್ಪ ನಾಂಗಾಲ ಗ್ರಾಮ ಮತ್ತು ಬಿಟ್ಟಂಗಾಲ ಅಂಚೆ. | *ನಾಂಗಾಲ ಗ್ರಾಮದಲ್ಲಿ ವೋಲ್ಟೇಜ್ ಸಮಸ್ಯೆಯಿದ್ದು ಪ್ರತ್ಯೇಕ ಪರಿವರ್ತಕ ಅಳವಡಿಸುವಂತೆ ಕೇಳಿಕೊಂಡರು.<br><br>* ನಾಂಗಾಲ ಗ್ರಾಮದ ಹಲವೆಡೆ ವಿದ್ಯುತ್ ಮಾರ್ಗದ ತಂತಿಯೂ ಕೆಳಮಟ್ಟದಲ್ಲಿ ಜೋತುಬಿದ್ದಿದ್ದು ಸರಿಪಡಿಸುವಂತೆ ಕೋರಿದರು.<br><br>* ನಾಂಗಾಲ ಗ್ರಾಮದ ಹಲವೆಡೆ ಬೀದಿದೀಪಗಳ ಇಲ್ಲದೆ ನಾಗರೀಕರಿಗೆ ಸಮಸ್ಯೆಯಾಗಿರುವುದರಿಂದ ಹೊಸ ಬೀದಿದೀಪಗಳನ್ನು ಅಳವಡಿಸುವಂತೆ ಕೇಳಿಕೊಂಡರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡುತ್ತ ಹಾಲಿಯಿರುವ ಪರಿವರ್ತಕದಲ್ಲಿ ಕುಡಿಯುವ ನೀರಿನ ಸ್ಥಾವರವಿದ್ದಲ್ಲಿ ಪ್ರತ್ಯೇಕ ಪರಿವರ್ತಕ ಅಳವಡಿಸಲು ಕೂಡಲೇ ಸ್ಥಳ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗು ವೋಲ್ಟೇಜ್ ಸಮಸ್ಯೆ ನಿವಾರಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಸ.ಕಾ.ನಿ.ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು.<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಸದರೀ ಕಾಮಗಾರಿಯು ಆನೆಕಾರಿಡಾರ್ ಯೋಜನೆಯಡಿಯಲ್ಲಿ ಮಂಜೂರಾಗಿದ್ದು ಶೀಘ್ರ ಕೆಲಸ ಮುಗಿಸುವಂತೆ ಹಾಗೂ ವಿದ್ಯುತ್ ಮಾರ್ಗಗಳು ಅತ್ಯಂತ ಅಪಾಯಕಾರಿ ಮಟ್ಟದಲ್ಲಿದ್ದರೆ ಒಂದು ಅಥವಾ ಎರಡು ಕಂಬಗಳ ಅವಶ್ಯಕತೆಯಿದ್ದಲ್ಲಿ ಸ್ಥಳ ಪರಿಶೀಲನೆ ಮಾಡಿ ಇಲಾಖೆ ವತಿಯಿಂದಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಸ.ಕಾ.ನಿ.ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಉತ್ತರಿಸುತ್ತಾ ಬೀದಿ ದೀಪ ಅಳವಡಿಸುವ ಕಾಮಗಾರಿಯು ಆಯಾ ಸ್ಥಳೀಯ ಸಂಸ್ಥೆಗಳ ಅಧೀನದಲ್ಲಿ ಬರುವುದರಿಂದ ಪಂಚಾಯ್ತಿಯಿಂದ ನಿಗಧಿತ ನಮೂನೆಯಲ್ಲಿ ಅರ್ಜಿ ಬಂದಲ್ಲಿ ಶೀಘ್ರ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು. |
| 2 | ಎಂ.ಬಿ.ಚೆನ್ನಪ್ಪ ಕುಕ್ಲೂರು ಗ್ರಾಮ | * ಶ್ರೀಯುತರ ಗೃಹಬಳಕೆ ಸ್ಥಾವರಕ್ಕೆ 3 ಕಿ.ವ್ಯಾ ವಿದ್ಯುತ್ ಸಂಪರ್ಕ ಕಲ್ಪಿಸಲು ಅಂದಾಜು ರೂ.123691.00 ವೆಚ್ಚವಾಗಿದ್ದು ಅಂದಾಜು ಮೊತ್ತ ಹೆಚ್ಚಾಗಿರುವುದರಿಂದ ವಿಭಾಗೀಯ ಕಛೇರಿಯಲ್ಲಿ ಕಡತವು ವಿಲೇವಾರಿಯಾಗಿರುವುದಿಲ್ಲದಿರುವ ಕುರಿತು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ), ಇಂತಹ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ವಿಭಾಗೀಯ ಕಛೇರಿಯಿಂದ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸೂಕ್ತ ಮಾರ್ಗದರ್ಶನ ಕೋರಿ ಕಾರ್ಪೋರೇಟ್ ಕಛೇರಿಗೆ ಪತ್ರ ರವಾನಿಸಲು ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಮಡಿಕೇರಿ ರವರಿಗೆ ಸೂಚಿಸಿದರು. |
| 3 | ಎಂ.ಜಿ.ಪೂಣಚ್ಚ, ವಿ.ಬಾಡಗ | *ಬಿ.ಶೆಟ್ಟಿಗೇರಿ ಫೀಡರ್‌ನ ಮಾರ್ಗವು ತುಂಬಾ ದೂರವಿದ್ದು ಹಾಗೂ ಮಾರ್ಗವು ಹಲವು ಮಾಲೀಕರ ತೋಟಗಳ ಮಧ್ಯೆ ಹಾದುಹೋಗಿದ್ದು ಬಿ.ಶೆಟ್ಟಿಗೇರಿ ಅಕ್ಕಪಕ್ಕ ಗ್ರಾಮಗಳಲ್ಲಿ ಅನಿಯಮಿತ ವಿದ್ಯುತ್ ಅಡಚಣೆಯಿಂದಾಗಿ ಸಮಸ್ಯೆಯಾಗಿದ್ದು ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡರು.<br><br>* ಬಿ.ಶೆಟ್ಟಿಗೇರಿ ಸುತ್ತಮುತ್ತಲ ಗ್ರಾಮಗಳಲ್ಲಿನ ತೋಟಗಳಲ್ಲಿ ವಿದ್ಯುತ್ ಕಂಬಗಳ ಅಂತರ ದೂರವಿರುವುದರಿಂದ ವಿದ್ಯುತ್ ತಂತಿಯೂ ತೀರಾ ಕೆಳಮಟ್ಟದಲ್ಲಿ ಮನುಷ್ಯರಿಗೆ/ಆನೆಗಳಿಗೆ ವಿದ್ಯುತ್ ಆಘಾತವುಂಟಾಗುವ ಸಂಭವವಿರುವುದರಿಂದ ಅತಿ ಶೀಘ್ರ ಸರಿಪಡಿಸುವಂತೆ ಕೇಳಿಕೊಂಡರು.<br><br>* ಬಿ.ಶೆಟ್ಟಿಗೇರಿ ಸುತ್ತಮುತ್ತಲ 9 ಗ್ರಾಮಗಳು ವಿರಾಜಪೇಟೆ ಶಾಖೆಗೆ ಒಳಪಟ್ಟಿದ್ದು ವಿರಾಜಪೇಟೆ ಪಟ್ಟಣದಿಂದ ಸುಮಾರು 20 ಕಿ.ಮೀ ಅಂತವಿರುತ್ತದೆ. ಬಿ.ಶೆಟ್ಟಿಗೇರಿ ಫೀಡರ್‌ನಲ್ಲಿ 5000ಕ್ಕೂ ಮೇಲ್ಪಟ್ಟು ಸ್ಥಾವರಗಳಿದ್ದು ಕಛೇರಿ ಕೆಲಸ ಹಾಗೂ ವಿದ್ಯುತ್ | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ವಿರಾಜಪೇಟೆ ಶಾಖಾಧಿಕಾರಿಗಳಿಗೆ ಕೂಡಲೇ ಸ್ಥಳ ಪರಿಶೀಲಿಸಿ ಫೀಡರ್ ನ್ನು ಪ್ರತ್ಯೇಕ ಮಾಡಿ ಹೊಸ ಫೀಡರ್‌ನ್ನು ನಿರ್ಮಿಸಲು ಅಂದಾಜುಪಟ್ಟಿ ತಯಾರಿಸಲು ಸೂಚಿಸಿದರು.<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಸದರೀ ಕಾಮಗಾರಿಯೂ ಆನೆಕಾರಿಡಾರ್ ಯೋಜನೆಯಡಿಯಲ್ಲಿ ಸೇರಿದ್ದು ಶೀಘ್ರ ಕೆಲಸ ಮುಗಿಸುವಂತೆ ಹಾಗೂ ವಿದ್ಯುತ್ ಮಾರ್ಗಗಳು ಅತ್ಯಂತ ಅಪಾಯಕಾರಿ ಮಟ್ಟದಲ್ಲಿದ್ದರೆ ಒಂದು ಅಥವಾ ಎರಡು ಕಂಬಗಳ ಅವಶ್ಯಕತೆಯಿದ್ದಲ್ಲಿ ಸ್ಥಳ ಪರಿಶೀಲನೆ ಮಾಡಿ ಇಲಾಖೆ ವತಿಯಿಂದಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಸ.ಕಾ.ನಿ.ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಪ್ರತ್ಯೇಕ ಶಾಖೆ ಸ್ಥಾಪಿಸಲು ಮೇಲಧಿಕಾರಿಗಳಿಗೆ ಶಿಫಾರಸು ಪತ್ರ ಬರೆಯುವಂತೆ ಸ.ಕಾ.ನಿ.ಇಂಜಿನಿಯರ್ (ವಿ) ರವರಿಗೆ ಸೂಚಿಸಿದರು. |

| | | | |
|---|---|---|---|
| | | ಮಾರ್ಗ ದುರಸ್ಥಿ ಕೆಲಸವನ್ನು ನಿರ್ವಹಿಸಲು ಕೇವಲ ಇಬ್ಬರು ಮಾರ್ಗದಾಳುಗಳಿದ್ದು ವಿದ್ಯುತ್ ಕೆಲಸ ಕಾರ್ಯಗಳು ತುಂಬಾ ವಿಳಂಭವಾಗುತ್ತಿದ್ದು ಪ್ರತ್ಯೇಕ ಶಾಖಾ ಕಛೇರಿ ಹಾಗೂ ಹೆಚ್ಚುವರಿ ಮಾರ್ಗದಾಳುಗಳನ್ನು ನೇಮಿಸುವಂತೆ ಕೇಳಿಕೊಂಡರು. | |
| 4 | ಟಿ.ಯು.ಪೂಣಚ್ಚ, ವಿಧ್ಯಾನಗರ, ವಿರಾಜಪೇಟೆ | * ವಿರಾಜಪೇಟೆ ಪಟ್ಟಣದ ವಿಧ್ಯಾನಗರದ ಬಡಾವಣೆಯಲ್ಲಿ ವೋಲ್ಟೇಜ್ ಸಮಸ್ಯೆ ಅಧಿಕವಾಗಿರುವದರಿಂದ ಹೊಸ ಪರಿವರ್ತಕ ಅಳವಡಿಸುವಂತೆ ಕೇಳಿಕೊಂಡರು. | * ಇದಕ್ಕೆ ಉತ್ತರಿಸಿದ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ರವರು ಐಪಿಡಿಎಸ್ ವಿದ್ಯುತ್ ಯೋಜನೆಯಡಿಯಲ್ಲಿ ಪ್ರತ್ಯೇಕೆ ಪರಿವರ್ತಕ ಅಳವಡಿಸಲು ಈಗಾಗಲೇ ಮಂಜೂರಾತಿ ದೊರಕಿದ್ದು ಸರ್ವೆ ಕಾರ್ಯ ಮುಗಿದ ಬಳಿಕ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿದರು ಹಾಗೂ ಸ.ಕಾ.ನಿ.ಇಂಜಿನಿಯರ್(ವಿ), ವಿರಾಜಪೇಟೆ ರವರು ಮಾತನಾಡುತ್ತಾ ವಿಧ್ಯಾನಗರ ಬಡಾವಣೆಯಲ್ಲಿ ಹೆಚ್ಚವರಿ 63 ಕೆವಿ ಸಾಮರ್ಥ್ಯದ ವಿದ್ಯುತ್ ಪರಿವರ್ತಕ ಕೇಂದ್ರ ನಿರ್ಮಿಸಲು ಅಭಿವೃದ್ಧಿ ಯೋಜನೆಯಡಿ ಅನುಮೋದನೆ ದೊರಕಿದ್ದು ವಿದ್ಯುತ್ ತಂತಿ ಹಾಗೂ ಇನ್ನಿತರ ಸಾಮಾಗ್ರಿಗಳ ಕೊರತೆಯಿದ್ದು ಸದರೀ ಸಾಮಾಗ್ರಗಳು ಲಭ್ಯವಾದ ತಕ್ಷಣ ಕೆಲಸ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು. |
| 5 | ಡಿ.ಎಂ.ರಾಜಕುಮಾರ್ ತೆಲುಗರ ಬೀದಿ ವಿರಾಜಪೇಟೆ | * ಶ್ರೀಯುತರ ಮನೆಯ ಮುಂದೆ ಹಾದು ಹೋಗಿರುವ ಎಚ್.ಟಿ ಮಾರ್ಗದ ಕಂಬವನ್ನು ಸ್ಥಳಾತರಿಸಲು ಅರ್ಜಿ ಸಲ್ಲಿಸಿದ್ದು ಸದರೀ ಅರ್ಜಿಯು ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಮಂಜೂರುಗೊಂಡಿದ್ದು ಸದರಿ ಕಾಮಗಾರಿಯನ್ನು ಇಲಾಖಾ ವತಿಯಂದ ಮಾಡಿಸಿಕೊಡುವಂತೆ ತಿಳಿಸಿದರು ಹಾಗೂ ಹಲವೆಡೆ ವಿದ್ಯುತ್ ಮಾರ್ಗದಲ್ಲಿ ನಿರ್ಮಾಣವಾದ ಕಟ್ಟಡಕ್ಕೆ ಸುರಕ್ಷಿತ ಅಂತರವಿಲ್ಲದಿರುವ ಬಗ್ಗೆ ಚರ್ಚಿಸಿದರು | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ವಿರಾಜಪೇಟೆ ಶಾಖಾಧಿಕಾರಿಗಳಿಗೆ ಸದರೀ ಜಾಗದ ವಿವರವನ್ನು ಪಟ್ಟಣ ಪಂಚಾಯ್ತಿಯಿಂದ ಪಡೆದುಕೊಂಡು ಸ್ವಯಂ ನಿರ್ವಹಣಾ ಯೋಜನೆಯಡಿಯಲ್ಲಿಯೇ ಕಾರ್ಯ ನಿರ್ವಹಿಸುವಂತೆ ಸೂಚಿಸಿದರು ಹಾಗೂ ಸ.ಕಾ.ನಿ.ಇಂಜಿನಿಯರ್(ವಿ), ವಿರಾಜಪೇಟೆ ರವರು ಮಾತನಾಡುತ್ತಾ ಕಟ್ಟಡ ನಿರ್ಮಾಣ ಮಾಡುವ ಅಂತರದಲ್ಲಿ ಮೂಲಭೂತ ಸೌಕರ್ಯಗಳಾದ ಒಳಚರಂಡಿ ಹಾಗೂ ವಿದ್ಯುತ್ ಮಾರ್ಗ ಹಾದು ಹೋಗಲು ಸ್ಥಳಬಿಟ್ಟು ಕಟ್ಟಡ ನಿರ್ಮಿಸಿದಲ್ಲಿ ಸುರಕ್ಷಿತ ಅಂತರವನ್ನು ಕಾಪಾಡಿಕೊಳ್ಳಬಹುದಾಗಿ ತಿಳಿಸಿದರು. |
| 6 | ಮಂದಣ್ಣ.ಎಸ್.ಟಿ ಮೇಕೂರು ಹೊಸ್ಕೇರಿ | * ಶ್ರೀಯುತರ ಸ್ಥಾವರ ಸಂಖ್ಯೆ:ಜಿ.ಕೆ.ಎಸ್.ಐ.ಪಿ 3200 ಕ್ಕೆ ಸರಿಯಾದ ಸಮಯಕ್ಕೆ ವಿದ್ಯುತ್ ಬಿಲ್ ಒದಗಿಸದ ಕುರಿತು.<br><br>* ಶ್ರೀಯುತರ ಮನೆಯ ಪಕ್ಕ ಹಾದುಹೋಗಿರುವ ವಿದ್ಯುತ್ ಮಾರ್ಗದಡಿಯಲ್ಲಿ ಮರಗಿಡಗಳಿದ್ದು ಅವುಗಳನ್ನು ಕಡಿಯಲು ಶ್ರೀ.ಅಪ್ಪಚ್ಚು ಎಂಬುವವರು ಅಡ್ಡಿಪಡಿಸುತ್ತಿರುವುದಾಗಿ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಮೆ:ಐಡಿಯ ಇನ್ಫಿನಿಟಿ ಸಲ್ಯುಸನ್ಸ್‌ನ ಪ್ರತಿನಿಧಿಯಾದ ನಾರಾಯಣರವರಿಗೆ ಸದರಿ ಸ್ಥಾವರವನ್ನು ಪರಿಶೀಲಿಸಿ ತಕ್ಷಣವೇ ಬಿಲ್ ಒದಗಿಸುವಂತೆ ತಿಳಿಸಿದರು.<br><br>* ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ (ವಿ) ಸಂಭಂಧಪಟ್ಟ ಶಾಖಾಧಿಕಾರಿಗಳು ಸ್ಥಳ ಪರಿಶೀಲಸಿ ಸೂಕ್ತ ಕ್ರಮತೆಗೆದುಕೊಳ್ಳುವಂತೆ ಸೂಚಿಸಿದರು. |

ತಮ್ಮ ವಿಶ್ವಾಸಿ,

ಅಧೀಕ್ಷಕ ಇಂಜಿನಿಯರ್ (ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ವಿರಾಜಪೇಟೆ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.